**ಕವಿತೆ**




## ಬಸವರಾಜ್ ಹೃತ್ಸಾಕ್ಷಿ

ಕಲೆ: ಎಸ್.ವಿ. ಹೂಗಾರ್


# ನನ್ನಲ್ಲಿ ಚಿಲ್ಲರೆ ಇರಲಿಲ್ಲ...



ನನ್ನಲ್ಲಿ ನಿಜವಾಗಿಯೂ ಚಿಲ್ಲರೆಯಿರಲಿಲ್ಲ
ಆ ಮುದುಕಿ ಹತ್ತು ರೂಪಾಯಿ ಕೇಳಿದಳು

ಮಗ ತನ್ನನು ಇಲ್ಲಿ
ಹೀಗೆ
ಬಿಟ್ಟು ಹೋದನೆಂದೂ
ತಾ ಮತ್ತೆ ಮನೆಗೆ ಹೋಗಲೊಲ್ಲೆನೆಂದೂ
ಹಲುಬ ಹತ್ತಿದಳು

ನಿನ್ನಿಲಿಂದಾ ಹೊಟ್ಯಸಿ
ಏನನಾ ತಿಂತೇನಿ ಕೊಡಪಾ... ಅಂತ
ನನ್ನ ಮುಂದೆಯೇ ಜೋತು ನಿಂತುಬಿಟ್ಟಳಾಕೆ

ಗುಬ್ಬಿದೇಹದ ಆಳದಿಂದ ಉಕ್ಕುಕ್ಕಿ ಬರುತ್ತಿದ್ದ
ಆಕೆಯ ಆರ್ತದನಿ
ಏನೋ ಹಕ್ಕಿನಿಂದ ನನ್ನನ್ನು ದಬಾಯಿಸುವಂತಿದ್ದು
ನಾನು...
ಮಿಕಿಮಿಕಿ ನೋಡುತ್ತಿರುವ
ಸಹ ಪ್ರಯಾಣಿಕರ ಕಣ್ಣ ಕುಣಿಕೆಯಲಿ
ಮುದುರಿ ಮುಟ್ಟಿಗೆಯಾಗಿಬಿಟ್ಟೆ

ನಾನೇನು ಮಾಡಲಿ
ನನ್ನಲ್ಲಿ ನಿಜಕ್ಕೂ ಚಿಲ್ಲರೆಯಿರಲಿಲ್ಲ

ಕೆಲ ನಿಮಿಷ ನನ್ನ ಮುಂದೆಯೇ
ಕಣ್ಣು ಮಂದ ಮಾಡಿಕೊಂಡು ನಿಂತಿದ್ದಾಕೆ
'ಹತ್ರುಪಾಯಿ ಕೊಡಪ್ಪೋ ಯಪ್ಪನೇ' ಅಂತ
ಚೀರಿದಳು